## ನಕ್ಕುಬಿಡಿ



### ಗುರುತು ಸಿಗಲ್ಲ

ಅಪ್ಪ: ಅಮ್ಮ ಎಲ್ಲೋ?
ಮಗ: ಬ್ಯೂಟಿ ಪಾರ್ಲರ್‌ಗೆ ಹೋಗಿದ್ದಾರೆ.
ಅಪ್ಪ: ಬೇಗ ಕರೆದುಕೊಂಡು ಬಾ.
ಮಗ: ಅವರು ಆಚೆಗೆ ಬಂದಾಗ ನನಗೆ ಗುರುತೇ ಸಿಗಲ್ಲಪ್ಪ!

(ಸಂಗ್ರಹ) ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು

### ಸಮಸ್ಯೆ

ಅಪ್ಪ: 'ಟು ಎಕ್ಸ್ ಟು' ಏನು?
ಮಗ: 'ಟು ಇಂಟು ಟು' ಫೋರ್ ಅಪ್ಪಾ.

### ಉಪಾಯ

ವೆಂಕ: ಪೊಲೀಸರು ವಿಚಾರಣೆಗೆ ಏನು ಮಾಡುತ್ತಾರೆ?
ನಾಣಿ: ಮೂಗು ಹಿಡಿಯುತ್ತಾರೆ.
ವೆಂಕ: ಏಕೆ?
ನಾಣಿ: ಆಗ ಅಪರಾಧಿ ಬಾಯಿ ಬಿಡುತ್ತಾನೆ!

### ಸಹಾಯಕ

ಗುಂಡ: ಕಣ್ಣಿನ ನಂತರದ ಮುಖ್ಯ ಇಂದ್ರಿಯ?
ಭಂಟ: ಕಿವಿ
ಗುಂಡ: ಹೇಗೆ?
ಭಂಟ: ಕನ್ನಡಕ ಹಾಕಿಕೊಳ್ಳಲು ಬೇಕಲ್ಲ!

### ಕದಿಯಲಾಗದ್ದು

ಟೀಚರ್: ಎದುರಿಗೇ ಇದ್ದರೂ ಕದಿಯಲು ಆಗದ್ದು ಯಾವುದು?
ಗುಂಡ: ಬಾಬಾ ಬುಡನ್‌ಗಿರಿ ಸಾರ್!

### ಉಳಿಯೋದೇನು

ಸುಬ್ಬ: ಈ ವಿಶ್ವ ಸುಂದರಿಯಲ್ಲಿ ಸುಪುಷ್ಟ ಕಾಯ, ತೆಳುಕಟಿ, ಮೀನಿನ ಕಂಗಳು, ಹರಿಣಿಯ ನಡೆ, ಗೌರವರ್ಣ ತೆಗೆದರೆ ಉಳಿಯುವುದೇನು?
ಮಬ್ಬ: ಉಳಿಯೋದು ನನ್ನ ಹೆಂಡ್ತಿ ರೂಪ!

### ಈಗ ಬಿದ್ದಿದ್ದಲ್ಲ

ಸುರೇಶ: ಏನಯ್ಯ, ಚಹಾದಲ್ಲಿ ನೊಣ ತೇಲ್ತಿದೆ?
ರಮೇಶ: ನೊಣಾನಾ, ಈಗ ಬಿದ್ದಿರಬೇಕು ಸಾರ್, ಸತ್ತು ತೇಲ್ತಿದೆ.
ಸುರೇಶ: ಹೇಗೆ ಹೇಳ್ತಿಯಾ?
ರಮೇಶ: ಸಾರ್, ಚಹಾ ಪುಡಿ ಕುದಿಸುವಾಗ ಒಂದು ನೊಣ ಬಿದ್ದಿತ್ತು. ಆದರೆ ಬಿಸಿಗೆ ಅದು ಕರಗಿ ಹೋಯ್ತು. ಅದರ ರೆಕ್ಕೆಗಳು ಮಾತ್ರ ಟೀ ಸೋಸಿದ ಜರಡಿಯಲ್ಲಿ ಉಳಿದವು. ಹಾಗಾಗಿ ಅದು ಈಗ ಬಿದ್ದಿದ್ದು.

### ಆಸಕ್ತಿ

ಶೈಲಾ: ಮನೋಜ್‌ಗೆ ನನ್ನಲ್ಲಿ ಆಸಕ್ತಿಯೇ ಇಲ್ಲ ಅಂತ ಕಾಣುತ್ತೆ, ಈಗ ಎರಡು ತಿಂಗಳಿನಿಂದ ಒಂದು ಮುತ್ತು ಕೂಡ ಅವನು ಕೊಟ್ಟಿಲ್ಲ.
ಸೌಜನ್ಯ: ಓ! ಹಾಗಾದರೆ ನೀನು ಅವನಿಗೆ ಡೈವೋರ್ಸ್ ಕೊಡಬಾರದೇಕೆ?
ಶೈಲಾ: ಅದು ಹೇಗೆ ಸಾಧ್ಯ? ಅವನು ನನ್ನ ಗಂಡನಲ್ಲವಲ್ಲ!

(ಸಂಗ್ರಹ)ಕೆ. ಶ್ರೀನಿವಾಸರಾವ್, ಹರಪನಹಳ್ಳಿ


ಆರೋಗ್ಯಕರವಾದ ಸವಿಯನ್ನು ಆನಂದಿಸಿ
Along with HERBS
100% NATURAL
ARECA TEA
HEALTHY • TASTY • REFRESHING
ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.
ಅರೆಕಾ ಟೀ ಒಂದು ಉತ್ತಮ ಆಯ್ಕೆ




ಆರೋಗ್ಯಕರ • ರುಚಿಕರ • ಉಲ್ಲಾಸಕರ
5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್, ನಿಂಬೆ ಮತ್ತು ತುಳಸಿ




WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018
ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bigbasket India's largest online supermarket | Flipkart
www.arecatea.in ನಲ್ಲೂ ಲಭ್ಯ